**ದೋ.ಸಾ. : 57 ಫ್ರಾ.ಸಾ. :44**

ಸಾಕ್ಷಿಯ ಹೆಸರು : ಅರುಣ್ ಕುಮಾರ್ ಕೊಳೂರ

**ದಿನಾಂಕಃ 16–04–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ–**

15. ಆರೋಪಿಯು ತನ್ನ ಸ್ವ–ಖುಷಿ ಹೇಳಿಕೆಯಲ್ಲಿ ಮುಂದುವರಿದು, "ನಾನು ಕತ್ತಿಯಿಂದ ಅಶ್ವಿನಿಯ ಕುತ್ತಿಗೆಗೆ ಹೊಡೆದಿದ್ದರಿಂದ, ಆಕೆಯೂ ಸಹ ಮೃತಪಟ್ಟಿರುತ್ತಾಳೆ, ನಂತರ ನಾನು ಅಲ್ಲಿಂದ ಕತ್ತಿಯನ್ನು ತೆಗೆದುಕೊಂಡು ಹೋಗಿ, ಅದನ್ನು ಒಂದು ಜಾಗದಲ್ಲಿ ಬಚ್ಚಿಟ್ಟು, ನಂತರ ಸ್ನಾನ ಮಾಡಿ, ನಾನು ಕೃತ್ಯದ ಸಮಯದಲ್ಲಿ ಧರಿಸಿದ್ದ ಬಟ್ಟೆಯನ್ನು ತೊಳೆದು ಹಾಕಿ, ನಂತರ ಮನೆಯಲ್ಲಿದ್ದಾಗ, ನನಗೆ ಮುಂದೆ ಏನು ಮಾಡಬೇಕು ಎಂದು ತೋಚದೇ ಮನೆಯ ಹತ್ತಿರದ ಎನ್.ಪಿ.ಸಿ. ಯ ಟಿ.ಟಿ. ವಾಹನದ ಚಾಲಕನಿಗೆ ಕರೆ ಮಾಡಿ, ಕಾರವಾರದ ರೈಲ್ವೇ ನಿಲ್ದಾಣಕ್ಕೆ ಹೋಗುವ ಟ್ರಿಪ್ ಇದೆಯಾ ಎಂದು ಕೇಳಿರುತ್ತೇನೆ, ಆಗ ಟಿ.ಟಿ. ಚಾಲಕನು ಟ್ರಿಪ್ ಇರುತ್ತದೆ ಎಂದು ಹೇಳಿದ್ದು, ಆಗ ನಾನೂ ಸಹ ಬರುತ್ತೇನೆ ಎಂದು ಹೇಳಿರುತ್ತೇನೆ, ಆನಂತರ ರಾತ್ರಿ 12.30 ಗಂಟೆ ಸುಮಾರಿಗೆ ಟಿ.ಟಿ. ವಾಹನದಲ್ಲಿ ಕಾರವಾರದ ರೈಲ್ವೇ ನಿಲ್ದಾಣಕ್ಕೆ ಹೋಗಿ, ನಂತರ ಅಲ್ಲಿಂದ ರೈಲಿನ ಮುಖಾಂತರ ಉಡುಪಿಗೆ ಹೋಗಿರುತ್ತೇನೆ ಹಾಗೂ ಮಾರನೇ ದಿನ ವಾಪಾಸು ಬಂದಿರುತ್ತೇನೆ" ಎಂದು ಹೇಳಿರುತ್ತಾನೆ. ಅದೇ ರೀತಿ ಆರೋಪಿಯು, ಸ್ವ–ಖುಷಿ ಹೇಳಿಕೆಯ ಸಮಯದಲ್ಲಿ "ನೀವು ನನ್ನೊಂದಿಗೆ ಬಂದರೆ ತಾನು ಕೃತ್ಯಕ್ಕೆ ಬಳಸಿದ ಕತ್ತಿಯನ್ನು ಹಾಗೂ ಕೃತ್ಯದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸುತ್ತೇನೆ ಮತ್ತು ಕೃತ್ಯದ ಸ್ಥಳವನ್ನು ತೋರಿಸುತ್ತೇನೆ" ಎಂದು ಹೇಳಿರುತ್ತಾನೆ. ಆರೋಪಿಯು ನೀಡಿದ ಸ್ವ–ಖುಷಿ ಹೇಳಿಕೆಯ ಭಾಗವನ್ನು ನಿಪಿ–106 ಎಂದು ಗುರುತಿಸಲಾಯಿತು. ಆರೋಪಿಯು ಸ್ವ–ಖುಷಿ ಹೇಳಿಕೆಯಲ್ಲಿ ತನ್ನ ಹೆಸರನ್ನು ಗುಸ್ತಿನ್ ಯಾನೆ ಗ್ರೇಗರಿ ಯಾನೆ ಗಿರಿ ತಂದೆ ಆಲ್ವಿನ್ ಡಿಕೋಸ್ಟಾ ಎಂದು ಹೇಳಿರುತ್ತಾನೆ.

16. ಆರೋಪಿಯು ತನ್ನ ಸ್ವ–ಖುಷಿ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿದ ಕತ್ತಿಯನ್ನು ಹಾಗೂ ಕೃತ್ಯದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸುತ್ತೇನೆ ಮತ್ತು ಕೃತ್ಯದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ, ಸದರಿ ವಸ್ತುಗಳನ್ನು ಜಪ್ತುಪಡಿಸಿಕೊಳ್ಳುವ ಸಲುವಾಗಿ, ಚಾಸಾ–20 ಮತ್ತು 21 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಅವರಿಗೆ ಆರೋಪಿಯು

ಸ್ವ–ಖುಷಿ ಹೇಳಿಕೆಯಲ್ಲಿ ನೀಡಿದ ವಿವರವನ್ನು ತಿಳಿಸಿರುತ್ತೇನೆ ಹಾಗೂ ಅವರೂ ಸಹ ಆರೋಪಿಯನ್ನು ಠಾಣೆಯಲ್ಲಿ ನೋಡಿ ಆತನ ವಿವರವನ್ನು ತಿಳಿದುಕೊಂಡಿರುತ್ತಾರೆ. ನಂತರ ನಾನು, ನಮ್ಮ ಸಿಬ್ಬಂದಿಗಳು, ಪಂಚರು ಮತ್ತು ಆರೋಪಿ ಎಲ್ಲರೂ ಇಲಾಖಾ ವಾಹನದಲ್ಲಿ ಬೆಳಿಗ್ಗೆ 10.00 ಗಂಟೆಗೆ ಠಾಣೆಯಿಂದ ಹೊರಟು, ಆರೋಪಿಯು ಸ್ಥಳ ತೋರಿಸಿದಂತೆ ವಾಹನವನ್ನು ಚಲಾಯಿಸಿಕೊಂಡು ಹೋಗಿ ಕಧ್ರಾದ ಚರ್ಚ್ ವಾಡ ಬಳಿ ಹೋಗಿರುತ್ತೇವೆ. ಅಲ್ಲಿ ಆರೋಪಿಯು ವಾಹನವನ್ನು ನಿಲ್ಲಿಸಲು ತಿಳಿಸಿದಂತೆ, ವಾಹನವನ್ನು ನಿಲ್ಲಿಸಿದ್ದು, ಆರೋಪಿಯು ವಾಹನದಿಂದ ಮುಂದಾಗಿ ಇಳಿದು, ದಕ್ಷಿಣದ ಕಡೆಗೆ ನಡೆದುಕೊಂಡು ಹೋಗಿ ಅಲ್ಲಿದ್ದ ತನ್ನ ಮನೆಯನ್ನು ತೋರಿಸಿ, ನಂತರ ಮನೆಯ ಮುಖ್ಯ ಬಾಗಿಲಿನ ಮೂಲಕ ಒಳಗೆ ಹೋಗಿ ಹಿಂಬಾಗಿಲಿನಿಂದ ಹೊರಗೆ ಬಂದು, ಮನೆಯ ಹಿಂದುಗಡೆಯಲ್ಲಿ ಪ್ರತ್ಯೇಕ ತಟ್ಟಿಯಿಂದ ತಯಾರಿಸಿದ ಗುಡಿಸಲಿಗೆ ಕರೆದುಕೊಂಡು ಹೋಗಿ, ಅಲ್ಲಿ ಕಟ್ಟಿಗೆ ಮತ್ತು ಮನೆ ಬಳಕೆಯ ಇತರೇ ಸಾಮಾನುಗಳನ್ನು ಮತ್ತು ಹಳೆಯ ಸೈಕಲನ್ನು ದಾಸ್ತಾನು ಮಾಡಿರುವ ಜಾಗದಲ್ಲಿ ಕೈ ಹಾಕಿ ಕತ್ತಿಯನ್ನು ಹೊರಗೆ ತೆಗೆದು ಹಾಜರುಪಡಿಸಿ ತಾನು ಇದೇ ಕತ್ತಿಯಿಂದ ವೇಲು ಮತ್ತು ಆತನ ಮಕ್ಕಳಾದ ಸತ್ಯನಾರಾಯಣ ಮತ್ತು ಅಶ್ವಿನಿಯನ್ನು ಕಡಿದು ಕೊಲೆ ಮಾಡಿರುತ್ತೇನೆ ಹಾಗೂ ಜಾನಕಿಗೆ ಇದೇ ಕತ್ತಿಯಿಂದ ಹೊಡೆದು ಹಲ್ಲೆ ಮಾಡಿರುತ್ತೇನೆ ಎಂದು ತಿಳಿಸಿದ್ದು, ನಂತರ ನಾನು ಅದನ್ನು ಪರಿಶೀಲಿಸಲಾಗಿ, ಸದರಿ ಕತ್ತಿಯ ಹಿಡಿಕೆಯು ಕಟ್ಟಿಗೆಯ ಹಿಡಿಕೆಯಾಗಿರುತ್ತದೆ, ಕತ್ತಿಯ ಒಟ್ಟು ಉದ್ದ 1 ಅಡಿ 6 ಇಂಚು ಇದ್ದು, ಅದರಲ್ಲಿ ಕಟ್ಟಿಗೆಯ ಹಿಡಿಕೆಯು 6 ಇಂಚು ಉದ್ದ ಮತ್ತು ಸುತ್ತಳತೆಯು 4½ ಇಂಚು ಇರುತ್ತದೆ, ಕತ್ತಿಯ ಒಂದು ಭಾಗವು ಹರಿತವಾಗಿದ್ದು, ಮತ್ತೊಂದು ಭಾಗವು ಮೊಂಡಾಗಿರುತ್ತದೆ, ಅದರ ತುದಿಯಲ್ಲಿ ಸ್ವಲ್ಪ ಬಾಗಿದ ವಿನ್ಯಾಸವಿರುತ್ತದೆ, ಕತ್ತಿಯ ಹಿಡಿಕೆಯ ನಂತರ ಪ್ರಾರಂಭದಲ್ಲಿ 1½ ಇಂಚು ಅಗಲ ಇದ್ದು, ಮುಂದೆ ಹೋದಂತೆ 3 ಇಂಚು ಅಗಲವಿದ್ದು, ತುದಿಯ ಭಾಗದಲ್ಲಿ ಅಗಲವು ಕಡಿಮೆಯಾಗುತ್ತಾ ಬಂದಿರುತ್ತದೆ ಮತ್ತು ಕತ್ತಿಯ ಮೇಲೆ ರಕ್ತದ ಕಲೆಗಳು ಇರುವುದು ಕಂಡು ಬಂದಿರುತ್ತದೆ. ನಂತರ ನಾನು ಸದರಿ ಕತ್ತಿಯನ್ನುಬಿಳಿ ಬಟ್ಟೆಯಲ್ಲಿ ಹಾಕಿ, 'M' ಗುರುತಿನ ಮೊಹರು ಮಾಡಿ, ನಂತರ ನಾನು ಅದಕ್ಕೆ 7G–1 ಎಂದು ಗುರುತಿಸಿರುತ್ತೇನೆ. ಅದೇ ತಟ್ಟಿಯಲ್ಲಿ ಆರೋಪಿಯು ತನ್ನ ಬಟ್ಟೆಗಳನ್ನು ಒಣಗಲು ಹಾಕಿದ್ದು, ಅವುಗಳನ್ನೂ ಸಹ ನನ್ನ ಮುಂದೆ ಹಾಜರುಪಡಿಸಿ, ತಾನು ಸದರಿ ಬಟ್ಟೆಗಳನ್ನು ಕೃತ್ಯದ ಸಮಯದಲ್ಲಿ ಧರಿಸಿದ್ದೆ ಎಂದು ಹೇಳಿದ್ದು, ಅವುಗಳನ್ನು ಪರಿಶೀಲಿಸಲಾಗಿ, ಒಂದು ಕಪ್ಪು ಬಣ್ಣದ ಅರ್ಧ ತೋಳಿನ ಟೀ–ಶರ್ಟ್, ಒಂದು ನೀಲಿ ಬಣ್ಣದ ರೆಡಿಮೇಡ್ ಚಡ್ಡಿ ಆಗಿರುತ್ತದೆ ಹಾಗೂ

ಅವುಗಳಿಗೆ ಅಲ್ಲಲ್ಲಿ ರಕ್ತ ತಾಗಿರುತ್ತದೆ. ನಂತರ ನಾನು ಅವುಗಳನ್ನು ಪಂಚರ ಸಮಕ್ಷಮ ಪ್ರತ್ಯೇಕ ಪೇಪರಿನಲ್ಲಿ ಸುತ್ತಿ, ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ, 'M' ಗುರುತಿನ ಮೊಹರು ಮಾಡಿ, ನಂತರ ನಾನು ಅವುಗಳಿಗೆ 7G–2 ಮತ್ತು 7G–3 ಎಂದು ಗುರುತಿಸಿರುತ್ತೇನೆ.

17. ನಂತರ ಆರೋಪಿಯ ಬಳಿ ಆತ ಉಪಯೋಗಿಸುತ್ತಿದ್ದ ಮೊಬೈಲ್ ಬಗ್ಗೆ ವಿಚಾರಿಸಿದಾಗ, ಆರೋಪಿಯು ಮನೆಯ ಒಳಗೆ ಹಾಲ್ ಗೆ ಬಂದು, ಟಿ.ವಿ.ಯ ಮೇಲಿದ್ದ ಒಂದು ಮೊಬೈಲನ್ನು ಹಾಜರುಪಡಿಸಿ, ಸದರಿ ಮೊಬೈಲನ್ನು ತಾನು ಉಪಯೋಗಿಸುತ್ತಿದ್ದೆ ಎಂದು ಹೇಳಿದ್ದು, ಅದನ್ನು ಪರಿಶೀಲಿಸಲಾಗಿ, ಸದರಿ ಮೊಬೈಲ್ ಸ್ಯಾಮಸಂಗ್ ಕಂಪನಿಯ ಬಿಳಿ ಬಣ್ಣದ ಮೊಬೈಲ್ ಆಗಿರುತ್ತದೆ ಹಾಗೂ ಅದರಲ್ಲಿ ಏರ್‌ಟೆಲ್ ಕಂಪನಿಯ ಸಿಮ್ ಇದ್ದು, ಮೊಬೈಲ್ ನಂ.9663275728 ಆಗಿದ್ದು ಮತ್ತು ಮೊಬೈಲ್ ಚಾಲೂ ಸ್ಥಿತಿಯಲ್ಲಿತ್ತು ಹಾಗೂ ಸದರಿ ಮೊಬೈಲಿನ IMEI ನಂಬರನ್ನು ಪಂಚನಾಮೆಯಲ್ಲಿ ನಮೂದಿಸಿ, ಜಪ್ತುಪಡಿಸಿಕೊಂಡಿರುತ್ತೇನೆ ಹಾಗೂ ಅದಕ್ಕೆ ನನ್ನ ಹಾಗೂ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ ಮತ್ತು 7G–4 ಎಂದು ಗುರುತಿಸಿರುತ್ತೇನೆ. ಆರೋಪಿಯ ಮನೆಗೆ ಕಧ್ರಾ ಗ್ರಾಮ ಪಂಚಾಯತಿಯ ಮನೆ ನಂ.56 ಇರುತ್ತದೆ ಹಾಗೂ ವಿಚಾರಿಸಲಾಗಿ, ಸದರಿ ಮನೆಯು ಆರೋಪಿಯ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ತಿಳಿದುಬಂದಿರುತ್ತದೆ. ನಂತರ ಆರೋಪಿಯು ನಮ್ಮನ್ನು ಕೃತ್ಯ ಎಸಗಿದ ಸ್ಥಳಕ್ಕೆ ಕರೆದುಕೊಂಡು ಹೋಗಿ, ಕಧ್ರಾ–ಮಲ್ಲಾಪುರ ರಸ್ತೆಯಲ್ಲಿ ಕೊಡಸಳ್ಳಿ ಡ್ಯಾಮ್‌ಗೆ ಹೋಗುವ ಕ್ರಾಸ್‌ನಲ್ಲಿ ಜೀಪಿನಿಂದ ಇಳಿದು, ಉತ್ತರ ದಿಕ್ಕಿನಲ್ಲಿರುವ ಅರಣ್ಯದ ಕಾಲುದಾರಿಯಲ್ಲಿ ಸುಮಾರು 20 ಮೀ. ನಡೆದುಕೊಂಡು ಹೋಗಿ, ಸತ್ಯನಾರಾಯಣನನ್ನು ಕೊಲೆ ಮಾಡಿದ ಸ್ಥಳವನ್ನು ತೋರಿಸಿರುತ್ತಾನೆ. ಸದರಿ ಸ್ಥಳವನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ, ನೆಲದ ಮೇಲೆ ಹಾಗೂ ಸುತ್ತಲಿನ ಎಲೆಗಳ ಮೇಲೆ ರಕ್ತ ಬಿದ್ದು ಒಣಗಿರುತ್ತದೆ. ಅಲ್ಲಿಂದ ಸುಮಾರು 15 ಅಡಿ ದೂರದಲ್ಲಿ ರಸ್ತೆಯ ಪೂರ್ವ ಬದಿಯಲ್ಲಿ ವೇಲುವನ್ನು ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತಾನೆ. ಸದರಿ ಸ್ಥಳವನ್ನೂ ಸಹ ಪರಿಶೀಲಿಸಲಾಗಿ, ಅಲ್ಲಿಯೂ ಸಹ ನೆಲದ ಮೇಲೆ ಮತ್ತು ಎಲೆಗಳ ಮೇಲೆ ರಕ್ತ ಬಿದ್ದು ಒಣಗಿರುತ್ತದೆ. ಸದರಿ ಸ್ಥಳದಿಂದ ದಕ್ಷಿಣಕ್ಕೆ ವಾಪಾಸು ಸುಮಾರು 12 ಅಡಿ ದೂರ ಬಂದು, ಅಲ್ಲಿ ರಸ್ತೆಯ ಪಶ್ಚಿಮ ಬದಿಯಲ್ಲಿ ಅಡ್ಡಲಾಗಿ ಬಿದ್ದಿದ್ದ ಸಾಗುವಾನಿ ಮರದ ಬುಡವನ್ನು ತೋರಿಸಿ, ತಾನು ಕೃತ್ಯ ಎಸಗುವ ಪೂರ್ವದಲ್ಲಿ ಕತ್ತಿಯನ್ನು ಬಚ್ಚಿಟ್ಟ ಸ್ಥಳ ಎಂದು ತೋರಿಸಿದ್ದು, ಸದರಿ ಸ್ಥಳವನ್ನೂ ಸಹ ಪರಿಶೀಲಿಸಿರುತ್ತೇನೆ. ಆನಂತರ ಆರೋಪಿಯು ನಮ್ಮನ್ನು ವೇಲುವಿನ ಮನೆಯ ಬಳಿ ಕರೆದುಕೊಂಡು ಬಂದು, ಸದರಿ ಮನೆಗೆ ವಿದ್ಯುತ್ ಸಂಪರ್ಕ

ಹೊಂದಿದ ವಯರನ್ನು ಕಟ್ ಮಾಡಿದ್ದನ್ನು ತೋರಿಸಿರುತ್ತಾನೆ, ಆನಂತರ ಮನೆಯ ಒಳಗೆ ಬಂದು, ಜಾನಕಿಯ ಮೇಲೆ ಕತ್ತಿಯಿಂದ ಹಲ್ಲೆ ಮಾಡಿದ ಸ್ಥಳ ಮತ್ತು ಅಶ್ವಿನಿಯನ್ನು ಕೊಲೆ ಮಾಡಿದ ಸ್ಥಳ ಎಂದು ತೋರಿಸಿರುತ್ತಾನೆ, ಅಲ್ಲಿಯೂ ಸಹ ನೆಲದ ಮೇಲೆ ರಕ್ತ ಬಿದ್ದು ಒಣಗಿರುವ ಕಲೆಗಳು ಕಂಡುಬಂದಿರುತ್ತದೆ. ಮೇಲೆ ಹೇಳಿದ ಎಲ್ಲಾ ಸ್ಥಳಗಳನ್ನು ಬೆಳಿಗ್ಗೆ 10.00 ರಿಂದ 11.30 ಗಂಟೆಯವರೆಗೆ ಪರಿಶೀಲಿಸಿ, ಪಂಚನಾಮೆ ಮಾಡಿರುತ್ತೇನೆ ಮತ್ತು ಫೋಟೊ ಮತ್ತು ವೀಡಿಯೋ ಮಾಡಿರುತ್ತೇನೆ.

18. ಸದರಿ ಪಂಚನಾಮೆಯನ್ನು ಮುಗಿಸಿ, ಠಾಣೆಗೆ ಬಂದ ನಂತರ ಜಪ್ತುಪಡಿಸಿಕೊಂಡ ವಸ್ತುಗಳನ್ನು ಸ್ವತ್ತುಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಜಪ್ತುಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–24 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–24(ಡಿ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ಕತ್ತಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–26 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಎಂ.ಓ–26(ಸಿ) ಎಂದು ಗುರುತಿಸಲಾಯಿತು. ಆರೋಪಿಯಿಂದ ಜಪ್ತುಪಡಿಸಿಕೊಂಡ ಕಪ್ಪು ಬಣ್ಣದ ಟೀ–ಶರ್ಟನ್ನು ಮತ್ತು ನೀಲಿ ಬಣ್ಣದ ರೆಡಿಮೇಡ್ ಚಡ್ಡಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂ.ಓ–27 ಮತ್ತು 28 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–27(ಸಿ) ಮತ್ತು 28(ಸಿ) ಎಂದು ಗುರುತಿಸಲಾಯಿತು. ಆರೋಪಿಯಿಂದ ಜಪ್ತುಪಡಿಸಿಕೊಂಡ ಮೊಬೈಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–29 ಎಂದು ಗುರುತಿಸಲಾಗಿರುತ್ತದೆ. ನಿಪಿ–24 ಜಪ್ತುಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–25 ರಿಂದ 35 ಎಂದು ಗುರುತಿಸಲಾಗಿರುತ್ತದೆ.

19. ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿ, ಆತನ ರಕ್ತದ ಗುಂಪಿನ ಬಗ್ಗೆ ವರದಿಯನ್ನು ನೀಡುವಂತೆ ಕಾರವಾರದ ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಕೋರಿಕೆ ನೀಡಿರುತ್ತೇನೆ. ಆರೋಪಿಯ ವೈದ್ಯಕೀಯ ಪರೀಕ್ಷೆಯ ನಂತರ ಆತನನ್ನು ಸೂಕ್ತ ಬೆಂಗಾವಲಿನಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿನ ಚಾಸಾ–25 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಯಲ್ಲಿ "ದಿ.14–02–2014 ರಂದು ರಾತ್ರಿ ಸುಮಾರು 9.30 ಗಂಟೆಯ ಸಮಯದಲ್ಲಿ ತಮ್ಮ ಮನೆಯ ಸಮೀಪದ ಚಾಸಾ–26

ರವರ ಮನೆಗೆ ಹೋಗಿ ವಾಪಾಸು ಬರುವಾಗ, ವೇಲುವಿನ ಮನೆಯ ಮುಂದೆ ರಸ್ತೆಯಲ್ಲಿ ವೇಲು ಮತ್ತು ಆತನ ಮಗ ನಿಂತಿದ್ದು, ಆರೋಪಿಯು ಅವರೊಂದಿಗೆ ಮಾತನಾಡುತ್ತಾ ನಿಂತಿದ್ದರು, ನಂತರ ಅವರೆಲ್ಲರೂ ಕಾಡಿನ ಕಡೆಗೆ ನಡೆದುಕೊಂಡು ಹೋಗುತ್ತಿದ್ದನ್ನು ನಾನು ನೋಡಿರುತ್ತೇನೆ, ನಂತರ ವೇಲು, ಸತ್ಯನಾರಾಯಣ ಮತ್ತು ಅಶ್ವಿನಿಯ ಕೊಲೆಯಾಗಿರುತ್ತದೆ ಮತ್ತು ಜಾನಕಿಯ ಮೇಲೆ ಮಾರಣಾಂತಿಕವಾಗಿ ಹಲ್ಲೆಯಾಗಿರುತ್ತದೆ ಎಂದು ತಿಳಿದುಬಂತು, ಅನಂತರ ನಾನು ಸ್ಥಳಕ್ಕೆ ಹೋಗಿ ಶವಗಳನ್ನು ನೋಡಿರುತ್ತೇನೆ ಹಾಗೂ ಜಾನಕಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ತಿಳಿದುಬಂದಿರುತ್ತದೆ, ವೇಲುವಿನ ಜೊತೆಯಲ್ಲಿ ಮಾತನಾಡುತ್ತಾ ನಿಂತಿದ್ದ ಆರೋಪಿಯೇ ಈ ಕೊಲೆಗಳನ್ನು ಮಾಡಿರುತ್ತಾನೆ ಆದ್ದರಿಂದ ಪೊಲೀಸರು ಆತನನ್ನು ದಸ್ತಗಿರಿ ಮಾಡಿರುತ್ತಾರೆ ಎಂದು ತಿಳಿದುಬಂತು" ಎಂದು ಹೇಳಿರುತ್ತಾರೆ. ಸದರಿ ಆರೋಪಿಯನ್ನು ನೋಡಿ ಗುರುತಿಸಿದ ಬಗ್ಗೆ ಹಾಗೂ ಆತನ ಹೆಸರನ್ನು ಕೇಳಿ ತಿಳಿದುಕೊಂಡ ಬಗ್ಗೆ ಹೇಳಿಕೆ ನೀಡಿರುತ್ತಾರೆ. ಚಾಸಾ-25 ರವರು ಈಗಾಗಲೇ ಮೃತಪಟ್ಟಿರುವ ಕಾರಣ, ಅವರ ಹೇಳಿಕೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-107 ಎಂದು ಗುರುತಿಸಲಾಯಿತು.

20. ಅದೇ ದಿನ ಆರೋಪಿಯ ಮೊಬೈಲ್ ನಂ. 9663275728 ನೇದರ ಸಿ.ಡಿ.ಆರ್. ಒದಗಿಸುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಗೆ ಈ-ಮೇಲ್ ಮೂಲಕ ಕೋರಿಕೊಂಡಿರುತ್ತೇನೆ. ದಿ.20-02-2014 ರಂದು ಚಾಸಾ-31 ಮತ್ತು 32 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-31 ರವರ ಹೇಳಿಕೆಯ ಭಾಗವನ್ನು ಈಗಾಗಲೇ ನಿಪಿ-46 ಎಂದು ಗುರುತಿಸಲಾಗಿರುತ್ತದೆ.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಹಾಗೂ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.